ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಸರ್ಕಾರವು ವಿಧಿಸಿದ್ದ ಸೇವಾ ಶುಲ್ಕವನ್ನು ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 57 ಪಪಾಯೋ 2003 ದಿನಾಂಕ: 21-7-2003ರಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಹಿಂದಕ್ಕೆ ಪಡೆಯಲಾಗಿದೆ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಸೇವಾ ಶುಲ್ಕವನ್ನು ಹಿಂತೆಗೆದುಕೊಳ್ಳಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿನ ಪಶು ಆಸ್ಪತ್ರೆ ಮತ್ತು ಪಶು ಚಿಕಿತ್ಸಾಲಯಗಳಿಗೆ ಮೂಲಭೂತ ಸೌಕರ್ಯಗಳು

4593 (5337) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿನ ಪಶು ಆಸ್ಪತ್ರೆ ಮತ್ತು ಪಶುಚಿಕಿತ್ಸಾಲಯಗಳ ಸಂಖ್ಯೆ ಎಷ್ಟು: (ಕ್ಷೇತ್ರವಾರು ವಿವರ ನೀಡುವುದು)

ಆ) ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿರುವ ಮೂಲಭೂತ ಸೌಕರ್ಯಗಳ ವಿವರಗಳೇನು:

ಇ) ಮೂಲಭೂತ ಸೌಕರ್ಯದ ಕೊರತೆ ಇದ್ದಲ್ಲಿ, ಅದನ್ನು ಅಭಿವೃದ್ಧಿ ಪಡಿಸಲು ಸರಕಾರವು ಕೈಗೊಳ್ಳುವ ಕ್ರಮಗಳೇನು:

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಪಶುಆಸ್ಪತ್ರೆಗಳು 21

ಪಶುಚಿಕಿತ್ಸಾಲಯಗಳು 83

(ಕ್ಷೇತ್ರವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ)

ಆ) ಬಹುತೇಕ ಪಶು ಆಸ್ಪತ್ರೆ ಮತ್ತು ಪಶುಚಿಕಿತ್ಸಾಲಯಗಳು ಸ್ವಂತ ಕಟ್ಟಡಗಳಲ್ಲಿರುವವು. ಕೃತಕ ಗರ್ಭಧಾರಣ ಸೌಲಭ್ಯ, ಶಸ್ತ್ರ ಚಿಕಿತ್ಸಾ ಸಲಕರಣೆಗಳು, ರೋಗ ತಪಾಸಣಾ ಸೌಲಭ್ಯ ಔಷಧೋಪಚಾರ ಮತ್ತು ಲಸಿಕೆ ನೀಡುವ ಮುಂತಾದ ಸೌಲಭ್ಯಗಳಿವೆ.

ಇ) ಎಸ್ ಜಿ ಎಸ್ ವೈ ಯೋಜನೆಯಡಿಯಲ್ಲಿ ದ್ರವ ಸಸಾರಜನಕ ಜಾಡಿಗಳನ್ನು ಹಾಗೂ ಜಾನುವಾರುಗಳನ್ನು ನಿರ್ಬಂದಿಸುವ ಕಟಗಟೆ ಖರೀದಿಸಲು ಪ್ರಸ್ತಾಪಿಸಲಾಗಿದೆ.

ಅನುಬಂಧ - 1

ಮಂಡ್ಯ ಜಿಲ್ಲೆಯಲ್ಲಿ ಕ್ಷೇತ್ರವಾರು ಇರುವ ಪಶುಆಸ್ಪತ್ರೆ ಮತ್ತು ಪಶುಚಿಕಿತ್ಸಾಲಯಗಳ ವಿವರ

ಕ್ರ.	ವಿಧಾನ ಸಭಾ ಕ್ಷೇತ್ರದ	ತಾಲ್ಲೂಕು	ಪಶುಆಸ್ಪತ್ರೆ	ಪಶುಚಿಕಿತ್ಸಾಲಯ
1.	ಮಂಡ್ಯ	ಮಂಡ್ಯ	1	6
2.	ಕೆರಗೋಡು	ಮಂಡ್ಯ	2	8
3.	ಶ್ರೀರಂಗಪಟ್ಟಣ	ಮಂಡ್ಯ	–	3
4.	ಶ್ರೀರಂಗಪಟ್ಟಣ	ಶ್ರೀರಂಗಪಟ್ಟಣ	2	7

1	2	3	3	5
5.	ಮದ್ದೂರು	ಮದ್ದೂರು	1	6
7.	ಕಿರುಗಾವಲು	ಮಳವಳ್ಳಿ	2	5
8.	ಮಳವಳ್ಳಿ	ಮಳವಳ್ಳಿ	3	11
9.	ಕೆ ಆರ್ ಪೇಟೆ	ಕೆ ಆರ್ ಪೇಟೆ	2	7
10.	ಪಾಂಡವಪುರ	ಕೆ ಆರ್ ಪೇಟೆ	1	1
11.	ಪಾಂಡವಪುರ	ಪಾಂಡವಪುರ	2	6
12.	ನಾಗಮಂಗಲ	ಪಾಂಡವಪುರ	3	6
		ಒಟ್ಟು	**21**	**83**

ಮೈಸೂರು ಸಕ್ಕರೆ ಕಾರ್ಖಾನೆಯ ಡಿಸ್ಟಿಲರಿ ಘಟಕ ಕುರಿತು

4594 (5338) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಡಿಸ್ಟಿಲರಿ ಘಟಕವು ಕಾರ್ಯನಿರ್ವಹಿಸುತ್ತಾ ಇದೆಯೇ?

ಆ) ಹಾಗಿದ್ದರೆ ಇದರ ಉತ್ಪನ್ನ ಹಾಗೂ ವಾಣಿಜ್ಯ ವಹಿವಾಟಿನ ವಿವರಗಳೇನು?

ಇ) ಈ ಘಟಕದ ಮೂರು ವರ್ಷಗಳ ಲಾಭ ನಷ್ಟದ ವಿವರಗಳೇನು?

ಈ) ಈ ಘಟಕವು ತನ್ನ ಸಂಪೂರ್ಣ ಸಾಮರ್ಥ್ಯದಷ್ಟು ಉತ್ಪಾದನೆ ಮಾಡುತ್ತಾ ಇದೆಯೆ, ಮಾಡದೆ ಇದ್ದಲ್ಲಿ ಕಾರಣಗಳೇನು?

ಉ) ಮೈಸೂರು ಸಕ್ಕರೆ ಕಾರ್ಖಾನೆಯ ಆಡಳಿತ ವ್ಯಾಪ್ತಿಯಲ್ಲಿ ಇರುವ ಸಾರಾಯಿ ಘಟಕಗಳೆಷ್ಟು? ಇದರಿಂದ ವಾರ್ಷಿಕ ಕಾರ್ಖಾನೆಗೆ ಬರುವ ಆದಾಯದ ವಿವರಗಳೇನು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಹೌದು

ಆ) ಡಿಸ್ಟಿಲರಿ ಘಟಕವು ಪ್ರತಿದಿನ 32,000 ಲೀಟರ್ ಸ್ಪಿರಿಟ್‌ನ್ನು ಉತ್ಪಾದಿಸಿ ಕಂಪೆನಿಯ ವಿವಿಧ ಸಾರಾಯಿ ಘಟಕಗಳಿಗೆ ಸಾರಾಯಿ ತಯಾರಿಕೆಗಾಗಿ ಸರಬರಾಜು ಮಾಡಲಾಗುತ್ತಿದೆ. ಇದರ ಮೌಲ್ಯ ರೂ. 4,72,000.00 ಆಗುತ್ತದೆ.

ಇ) ಡಿಸ್ಟಿಲರಿ ಘಟಕವು ಲಾಭದಲ್ಲಿ ನಡೆಯುತ್ತಿದೆ. ಈ ಘಟಕವು ಮೂರು ವರ್ಷಗಳಲ್ಲಿ ಮಾಡಿರುವ ಲಾಭದ ವಿವರಗಳು ಈ ಕೆಳಕಂಡಂತಿರುತ್ತದೆ:

1999–2000 : ರೂ. 402.82 ಲಕ್ಷಗಳು

2000–2001 : ರೂ. 464.61 ಲಕ್ಷಗಳು

2001–2002 : ರೂ. 481.26 ಲಕ್ಷಗಳು

ಈ) ಘಟಕವು ತನ್ನ ಸಂಪೂರ್ಣ ಸಾಮರ್ಥ್ಯದಷ್ಟು ಉತ್ಪಾದನೆ ಮಾಡುತ್ತಾ ಇರುತ್ತದೆ.

ಉ) ಮೈಸೂರು ಸಕ್ಕರೆ ಕಾರ್ಖಾನೆಯ ಆಡಳಿತ ವ್ಯಾಪ್ತಿಯಲ್ಲಿ ಇರುವ ಸಾರಾಯಿ ಘಟಕಗಳು ಒಟ್ಟು 13, ಇದರಿಂದ ಕಳೆದ ಮೂರು ವರ್ಷಗಳಲ್ಲಿ ಕಾರ್ಖಾನೆಗೆ ಆಗಿರುವ ಆದಾಯದ ವಿವರಗಳು ಈ ಕೆಳಕಂಡಂತಿದೆ.